


بسم اللهِ الرّحمٰن الرّحيم

# ಮಧ್ಯಪ್ರಾಚ್ಯ ಸಂಘರ್ಷ – ಮುಸ್ಲಿಂ ಸಮುದಾಯಕ್ಕೆ ಉಪದೇಶ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06–03–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ. بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್[ಸ] ತಂದ ಸಂದೇಶದ ಉದ್ದೇಶವೇನೆಂದರೆ, ಏಕದೇವನ ಮೇಲೆ ನಂಬಿಕೆ ಇಡುವುದು, ಅವನನ್ನು ಆರಾಧಿಸುವುದು, ಅವನ ಏಕತ್ವವನ್ನು (ತೌಹೀದ್) ಸ್ಥಾಪಿಸುವುದು, ಅದಕ್ಕಾಗಿ ಶ್ರಮಿಸುವುದು, ಅದೇ ರೀತಿ ಅವನ ದಾಸರ ಹಕ್ಕುಗಳನ್ನು ಪೂರೈಸಲು ಪ್ರಯತ್ನಿಸುವುದು ಹಾಗೂ ಒಂದೇ ಸಮುದಾಯವಾಗಿ, ಪರಸ್ಪರ ಸಹೋದರರಂತೆ ಬದುಕುವುದಾಗಿದೆ. ಆದರೆ ಇಂದು ನಾವು ಕಲಿಮ ಉಚ್ಚರಿಸುವವರು ಎಂದು ವಾದಿಸುವವರಾದರೂ ನಾವು ಒಗ್ಗಟ್ಟಾಗಿ ಉಳಿದಿಲ್ಲ. ನಾವು ಯಾವ ಬೋಧನೆಯನ್ನು ಹೇಳಿಕೊಳ್ಳುತ್ತೇವೆಯೋ, ನಮ್ಮ ಕಾರ್ಯಗಳು ಅದಕ್ಕೆ ತಕ್ಕಂತೆ ಇಲ್ಲ. ಅದರ ಪರಿಣಾಮವಾಗಿ, ಇಸ್ಲಾಮಿಕ ದೇಶಗಳು ಅತ್ಯಂತ ಚಿಂತಾಜನಕ ಸ್ಥಿತಿಯಲ್ಲಿದೆ ಎಂದು ನಾವು ಕಾಣುತ್ತೇವೆ. ಕೆಲವು ದೇಶಗಳ ಬಳಿ ನೈಸರ್ಗಿಕ ಸಂಪನ್ಮೂಲಗಳು ಮತ್ತು ಅದರ ಸಂಪತ್ತು ಇದೆ, ಆದರೆ ಇದರ ಹೊರತಾಗಿಯೂ ಲೋಕದ ದೊಡ್ಡ ದೇಶಗಳ ಮುಂದೆ ಅವರಿಗೆ ಯಾವುದೇ ವಿಶೇಷ ಸ್ಥಾನಮಾನವಿಲ್ಲ ಮತ್ತು ಧರ್ಮದ ಪ್ರಗತಿಗಾಗಿ ಅವರ ಯಾವುದೇ ವಿಶೇಷ ಪಾತ್ರವಿಲ್ಲ. ಇಸ್ಲಾಮಿನ ಬೋಧನೆಗಳನ್ನು ಪಾಲಿಸಲು ಅವರ ಕಡೆಯಿಂದ ಯಾವುದೇ ವಿಶೇಷ ಪ್ರಯತ್ನವೂ ಕಂಡುಬರುತ್ತಿಲ್ಲ. ಇದರ ಫಲಿತಾಂಶವು ಸ್ಪಷ್ಟ, ಅನ್ಯರು ಈ ಪರಿಸ್ಥಿತಿಯ ಲಾಭವನ್ನು ಪಡೆಯುತ್ತಾರೆ.

ಮುಸ್ಲಿಂ ಸಮುದಾಯ ಎಂಬ ನಿಟ್ಟಿನಲ್ಲಿ ಮುಸ್ಲಿಮರು ಒಂದಾಗಲು ಮತ್ತು ಅದಕ್ಕಾಗಿ ಕಠಿಣ ಪ್ರಯತ್ನ ಮಾಡಲು ಶ್ರಮಿಸಬೇಕು. ಹಾಗಾದರೆ ಮಾತ್ರ ನಾವು ಲೋಕದ ದಾಳಿಗಳಿಂದ ಪಾರಾಗಲು ಸಾಧ್ಯ, ಹಾಗಾದರೆ ಮಾತ್ರ ನಾವು ನಮ್ಮ ಘನತೆಯನ್ನು ಸ್ಥಾಪಿಸಲು ಸಾಧ್ಯ ಮತ್ತು ಇಸ್ಲಾಂ ವಿರೋಧಿ ಶಕ್ತಿಗಳು ನಮ್ಮನ್ನು ಒಳಗಿನಿಂದಲೇ ಹರಿದುಹಾಕುವುದನ್ನು ತಡೆಯಲು ಸಾಧ್ಯ. ಇದಕ್ಕಾಗಿ ಅಲ್ಲಾಹನು ಈ ಯುಗದಲ್ಲಿ ಏನು ವ್ಯವಸ್ಥೆ ಮಾಡಿದ್ದಾನೆ ಎಂಬುದನ್ನು ನಾವು ಯೋಚಿಸಬೇಕು. ಅಲ್ಲಾಹನು ಈ ಉದ್ದೇಶಕ್ಕಾಗಿ ಮಸೀಹ್ ಮೌಊದ್[ಅ]ರನ್ನು ನಿಯೋಜಿಸಿದ್ದಾನೆ.

(ಹುಝೂರ್ ಹೇಳಿದರು:) ನಾನು ಹೇಳಿದಂತೆ, ನಾನು ಬಹಳ ಕಾಲದಿಂದ ಜನರ ಗಮನ ಸೆಳೆಯುತ್ತಲೇ ಬಂದಿದ್ದೇನೆ. ನನ್ನ ಮಾತುಗಳನ್ನು ಕೇಳಿ, 'ನೀವು ಲೋಕದ ಬಗ್ಗೆ ತುಂಬಾ ನಿರಾಶಾದಾಯಕ ಮಾತುಗಳನ್ನು ಆಡುತ್ತೀರಿ, ಪ್ರಪಂಚವು ಭಯಾನಕ ಯುದ್ಧದಲ್ಲಿ ಸಿಲುಕಿಕೊಳ್ಳುವುದು ಎಂಬ ನಕಾರಾತ್ಮಕ ಕಲ್ಪನೆಯನ್ನು ಹೊಂದಿದ್ದೀರಿ' ಎಂದು ಹೇಳುತ್ತಿದ್ದ ಅದೇ ಜನರು, ಇಂದು ಸ್ವತಃ ಹೀಗೆ ಹೇಳಲಾರಂಭಿಸಿದ್ದಾರೆ: 'ಕೆಲವು ವರ್ಷಗಳ ಹಿಂದೆ ನಾವು ಯಾವುದನ್ನು ಅಸಂಭವ ಎಂದು ಭಾವಿಸಿದ್ದೆವೋ, ಅದು ಈಗ ನಡೆಯುತ್ತಿವೆ ಮತ್ತು ಯುದ್ಧಗಳು ಪ್ರಾರಂಭವಾಗಿವೆ.'

(ಹುಝೂರ್ ಹೇಳಿದರು:) ಪಾಶ್ಚಿಮಾತ್ಯ ದೇಶಗಳು ಮೊದಲು ಇಸ್ಲಾಮಿಕ ದೇಶಗಳನ್ನು ಪರಸ್ಪರ ಕಾದಾಡುವಂತೆ ಮಾಡಿದವು ಮತ್ತು ಈಗ ಅವರ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳಲು ನಿರಂತರ ಪ್ರಯತ್ನಗಳನ್ನು ಮಾಡುತ್ತಿವೆ. ಈ ದಜ್ಜಾಲಿ ಶಕ್ತಿಗಳು ಮುಸ್ಲಿಮರನ್ನು ಎಂದಿಗೂ ಒಗ್ಗಟ್ಟು ಮತ್ತು ಶಾಂತಿಯಿಂದ ಇರಲು ಬಿಡದು ಎಂಬ ವಾಸ್ತವವನ್ನು ಮುಸ್ಲಿಮರು ತಿಳಿದುಕೊಳ್ಳಬೇಕು. ಮುಸ್ಲಿಮರ ನಡುವೆ ಸದಾ ಕಲಹವನ್ನು ಸೃಷ್ಟಿಸುತ್ತಲೇ ಇರುವುದೇ ಅವರ ನಿಜವಾದ ಅಜಂಡ ಆಗಿದೆ.

ಅಮೆರಿಕವು ಅನೇಕ ಇಸ್ಲಾಮಿಕ ದೇಶಗಳಲ್ಲಿ ತನ್ನ ಸೇನಾ ನೆಲೆಗಳನ್ನು ಸ್ಥಾಪಿಸಿದೆ, ಆದರೆ ಏಕಾಗಿ? ಆ ದೇಶಗಳ ರಕ್ಷಣೆಗಾಗಿಯೇ? ಅಷ್ಟಕ್ಕೂ ಈ ಅರಬ್ ದೇಶಗಳಿಗೆ ಯಾರಿಂದ ಅಪಾಯವಿತ್ತು? ಈ ಪ್ರಬಲ ರಾಷ್ಟ್ರಗಳೇ ಸ್ವತಃ ಅಪಾಯಗಳನ್ನು ಸೃಷ್ಟಿಸಿದವು ಮತ್ತು 'ನಿಮಗೆ ಅಪಾಯವಿದೆ, ಆದ್ದರಿಂದ ನಿಮ್ಮ ರಕ್ಷಣೆಗಾಗಿ ಈ ವ್ಯವಸ್ಥೆ ಮಾಡಲಾಗುತ್ತಿದೆ'

ಎಂಬ ಭ್ರಮೆಯನ್ನು ಮುಸ್ಲಿಂ ದೇಶಗಳಲ್ಲಿ ಬಿತ್ತಿದವು. ಮುಸ್ಲಿಂ ದೇಶಗಳಿಗೆ ಯಾರಿಂದ ನಿಜವಾದ ಅಪಾಯವಿದೆಯೋ, ಅವರ ವಿರುದ್ಧ ಈ ಸೇನಾ ನೆಲೆಗಳನ್ನು ಅವರು ಎಂದಿಗೂ ಬಳಸಲಾರರು.

ಇರಾನ್ ಅಂತೂ ಈ ದೇಶಗಳಿಗೆ ಯಾವಾಗಲೂ ಕಣ್ಣಿಗೆ ಚುಚ್ಚುವಂತಿತ್ತು. ಇಸ್ರೇಲ್ ವಿರುದ್ಧ ಇರಾನಿನ ನೀತಿಯು ಹೆಚ್ಚು ಕಠಿಣವಾಗಿತ್ತು. ಇತರ ಇಸ್ಲಾಮಿಕ ದೇಶಗಳೊಂದಿಗೆ ಅದರ ನಂಬಿಕೆಗಳ ಭಿನ್ನಾಭಿಪ್ರಾಯವೂ ಇತ್ತು. ಈ ಎಲ್ಲದರ ಲಾಭವನ್ನು ಈ ಜಾಗತಿಕ ಶಕ್ತಿಗಳು ಪಡೆದುಕೊಂಡವು ಮತ್ತು ಈ ಪ್ರದೇಶದಲ್ಲಿ ತಮ್ಮ ಅಸ್ತಿತ್ವವನ್ನು ಖಚಿತಪಡಿಸಿಕೊಂಡವು. ಈ ನೆಲೆಗಳ ಕಾರಣದಿಂದಾಗಿಯೇ ಅರಬ್ ದೇಶಗಳ ಮೇಲೆ ದಾಳಿಗಳ ಅಪಾಯವಿತ್ತು ಮತ್ತು ದಾಳಿ ನಡೆಯಿತು. ಈ ದಾಳಿಗಳಿಂದ ಅರಬ್ ದೇಶಗಳ ಆರ್ಥಿಕತೆ ನಾಶವಾಯಿತು. ಈ ಪರಿಸ್ಥಿತಿಯ ಲಾಭವು ಸಹ ಈ ಜಾಗತಿಕ ಪ್ರಬಲ ರಾಷ್ಟ್ರಗಳಿಗೇ ಆಯಿತು. ಭವಿಷ್ಯದಲ್ಲೂ ಆಗಲಿದೆ. 'ಈ ಕಲಹವು ಹೆಚ್ಚಾಗುತ್ತಲೇ ಹೋಗುವುದು' ಎಂದು ಇರಾಕ್ ಯುದ್ಧದ ಸಮಯದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್[(ರಹ್ಮಹುಲ್ಲಾಹ್)] ಹೇಳಿದ್ದರು. ಮುಸ್ಲಿಂ ದೇಶಗಳು ಇದರಿಂದ ಪಾಠ ಕಲಿತಿದ್ದರೆ ಎಷ್ಟು ಚೆನ್ನಾಗಿತ್ತು!

ಈ ಅಶಾಂತಿಯು ಇದೇ ಜಾಗತಿಕ ಶಕ್ತಿಗಳಿಂದ ಹರಡಲ್ಪಟ್ಟಿದೆ. ಅಲ್ಲಾಹನ ಯಾವುದಾದರೂ ವಿಶೇಷ ತೀರ್ಮಾನವಿಲ್ಲದೇ ಮೇಲ್ನೋಟಕ್ಕೆ ಇದು ನಿಲ್ಲುವ ಯಾವುದೇ ಲಕ್ಷಣ ಕಾಣುತ್ತಿಲ್ಲ. ಇದಕ್ಕಾಗಿ ಮುಸ್ಲಿಮರು ಹೇಗಾದರೂ ಪ್ರಯತ್ನಿಸಬೇಕಾಗುವುದು ಮತ್ತು ನಾವು ಅದಕ್ಕಾಗಿ ದುಆ ಸಹ ಮಾಡಬೇಕು.

ಈ ದೌರ್ಜನ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ರೀತಿಯನ್ನು ನೋಡಿದರೆ, ವ್ಯಾಪಕ ಪ್ರಮಾಣದ ಮಹಾಯುದ್ಧ ನಡೆಯಲಿದೆ ಎಂದು ತೋರುತ್ತದೆ. ಮಾತ್ರವಲ್ಲ, ಕೆಲವು ಪಾಶ್ಚಿಮಾತ್ಯ ವಿಶ್ಲೇಷಕರ ಪ್ರಕಾರ ಮಹಾಯುದ್ಧವು ಪ್ರಾರಂಭವಾಗಿ ಬಿಟ್ಟಿದೆ. ಜಾಗತಿಕ ಯುದ್ಧ ಪ್ರಾರಂಭವಾಗಿದೆ ಎಂದೇ ನಾನೂ ಕೂಡ ಹೇಳುತ್ತೇನೆ. ಆದರೆ ಈಗಲೂ ಮುಸ್ಲಿಂ ಲೋಕವು ವಿವೇಕದಿಂದ ವರ್ತಿಸಿದರೆ, ಈಗಲೂ ದಜ್ಜಾಲನ ಕುತಂತ್ರದಿಂದ ಸುರಕ್ಷಿತವಾಗಿರಲು ಸಾಧ್ಯವಿದೆ.

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧವು, ಅಮೆರಿಕವು ಇರಾನ್ ಮೇಲೆ ದಾಳಿ ಮಾಡುವ ಮೂಲಕ ಪ್ರಾರಂಭವಾಯಿತು ಎಂದು ಬೇಕಾದರೆ ಹೇಳಬಹುದಾದರೂ ಇರಾನ್ ಮೊದಲೇ ಹೀಗೆ ಎಚ್ಚರಿಕೆ ನೀಡಿತ್ತು: 'ಒಂದು ವೇಳೆ ನಮ್ಮ ಮೇಲೆ ದಾಳಿ ನಡೆದರೆ ನಾವು ಅರಬ್ ದೇಶಗಳಲ್ಲಿರುವ ಅಮೆರಿಕನ್ ನೆಲೆಗಳ ಮೇಲೆ ದಾಳಿ ಮಾಡುತ್ತೇವೆ.' ಹಾಗೆಯೇ ಆಯಿತು. ಇವರು ಆಡಳಿತ ಬದಲಾವಣೆಯ ಘೋಷಣೆ ಕೂಗುತ್ತಿದ್ದರು, ಆದರೆ ಏನಾಯಿತು? ಖಾಮಿನ್ಯೆ ಸಾಹಿಬ್‌ರಿಗೆ ಶಹಾದತಿನ ಸ್ಥಾನ ಲಭಿಸಿತು ಮತ್ತು ಅವರ ಗೌರವ ಇನ್ನೂ ಹೆಚ್ಚಾಯಿತು. ಅವರ ಇಡೀ ಕುಟುಂಬವನ್ನು ಕೊಲ್ಲಲಾಯಿತು, ಇದರಿಂದ ಆಡಳಿತ ಬದಲಾವಣೆಯಾಗಲಿಲ್ಲ, ಬದಲಾಗಿ ಅವರ ಜನಾಂಗ ಇನ್ನಷ್ಟು ಒಗ್ಗೂಡಿತು. ಮಧ್ಯಪ್ರಾಚ್ಯದ ಅರಬ್ ದೇಶಗಳಲ್ಲಿ ರಕ್ಷಣಾ ಶಕ್ತಿಯಿಲ್ಲ, ಅವರು ಸಂಪೂರ್ಣವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳ ಮೇಲೆಯೇ ಅವಲಂಬಿತರಾಗಿದ್ದಾರೆ. ಈ ಯುದ್ಧವು ಈಗ ಭಯಾನಕ ಸ್ವರೂಪ ಪಡೆದುಕೊಂಡಿದೆ.

ಅರಬ್ ದೇಶಗಳಿಗೆ ಒಂದೆಡೆ ತೈಲ ಬಾವಿಗಳು ಮುಚ್ಚಿರುವುದರಿಂದ ನಷ್ಟವಾಗುತ್ತಿದೆ ಮತ್ತು ಬೆಲೆ ಏರಿಕೆಯಾಗುತ್ತಿದೆ; ಇನ್ನೊಂದೆಡೆ ಅವರು ಈ ಯುದ್ಧದಲ್ಲಿ ಅಮೆರಿಕದ ರಕ್ಷಣಾ ಸೌಲಭ್ಯವನ್ನು ಪಡೆಯುವ ವೆಚ್ಚವನ್ನೂ ಭರಿಸಬೇಕಾಗುತ್ತದೆ. ಇದೆಲ್ಲದರಿಂದ ಅರಬ್ ದೇಶಗಳ ಆರ್ಥಿಕತೆಗೆ ಭಾರಿ ನಷ್ಟವಾಗಲಿದೆ.

ಅಮೆರಿಕದ ಅಧ್ಯಕ್ಷರು ಹಿಂದಿನ ಅಮೆರಿಕನ್ ಸರ್ಕಾರಗಳ ನೀತಿಯನ್ನೇ ಅನುಸರಿಸುತ್ತಿದ್ದಾರೆ. ಇದು ಅವರ ಇಂದಿನ ನೀತಿಯಲ್ಲ, ಬದಲಾಗಿ ಎಲ್ಲಿ ಬೇಕಾದರೂ ಆ ಪ್ರದೇಶದ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳುವುದು ಮತ್ತು ಯಾವುದಾದರೂ ಕಾರಣ ನೀಡಿ ಅದಕ್ಕೆ ಸಮರ್ಥನೆ ನೀಡುವುದು ಅವರ ಬಹಳ ಹಿಂದಿನಿಂದಲೂ ಇರುವ ನೀತಿಯಾಗಿದೆ. ಅವರೊಂದಿಗೆ ಸೇರಿಕೊಳ್ಳದ ದೇಶವನ್ನು ಬೆದರಿಸಲಾಗುತ್ತದೆ ಮತ್ತು ದೌರ್ಜನ್ಯ ಮಾಡಲಾಗುತ್ತದೆ.

(ಹುಝೂರ್ ಹೇಳಿದರು:) 'ಅಮೆರಿಕ ನಡೆಸಿದ ಯಾವುದೇ ಯುದ್ಧದಲ್ಲೂ (ಅವರು ಹೇಳುತ್ತಿರುವಂತೆ) ಮಹಿಳೆಗೆ ಸ್ವಾತಂತ್ರ್ಯ ಸಿಕ್ಕಿಲ್ಲ' ಎಂದು ಯುರೋಪಿಯನ್ ಪಾರ್ಲಿಮೆಂಟ್‌ನಲ್ಲಿ ಅವರ ಓರ್ವ ಸ್ಪ್ಯಾನಿಷ್ ಮಹಿಳಾ ಸಂಸದೆ ಬಹಳ ಮುಕ್ತವಾಗಿ ಹೇಳಿಕೆ ನೀಡಿದ್ದಾರೆ. ಅವರು ಮಹಿಳೆಯಾಗಿದ್ದುಕೊಂಡು ಮಹಿಳೆಯರ ವಿಷಯವನ್ನು ಎತ್ತಿದರು. ಏಕೆಂದರೆ ತಾವು ಇರಾನಿಯನ್ ಮಹಿಳೆಯರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದೇವೆ ಎಂದು ಅಮೆರಿಕನ್ನರು ಹೇಳಿಕೊಳ್ಳುವುದು ಸಂಪೂರ್ಣ ಸುಳ್ಳು ಮತ್ತು ಇದರಿಂದ ಇರಾನಿಯನ್ ಮಹಿಳೆಗೆ ಎಂದಿಗೂ ಸ್ವಾತಂತ್ರ್ಯ ಸಿಗದು. ಅಮೆರಿಕವು ಎಂದೂ ಯಾವುದೇ ಮಹಿಳೆಯ ಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡಿಲ್ಲ ಮತ್ತು ಅವರಿಗೆ ಸ್ವಾತಂತ್ರ್ಯ ಕೊಡಿಸುವಲ್ಲಿ ಯಶಸ್ವಿಯೂ ಆಗಿಲ್ಲ ಎಂದು ಅವರು ಹೇಳುತ್ತಾರೆ. ಎಲ್ಲಿ ನ್ಯಾಯವಿಲ್ಲವೋ ಅಲ್ಲಿ ವಿನಾಶ ಉಂಟಾಗುತ್ತದೆ. ಈ ರಾಷ್ಟ್ರಗಳು ನೂರಾರು ಮಕ್ಕಳು

ಮತ್ತು ಮುಗ್ಧರನ್ನು ಕೊಂದಿವೆ. ಇದು ಎಂತಹ ಯುದ್ಧ? ಮಕ್ಕಳ ಶಾಲೆಗಳ ಮೇಲೆ ಬಾಂಬ್ ದಾಳಿ ನಡೆಸಲಾಗುತ್ತಿದೆ. ಅದನ್ನು ಪ್ರಶ್ನಿಸುವವರೇ ಇಲ್ಲ.

(ಹುಝೂರ್ ಹೇಳಿದರು:) ಇಸ್ಲಾಂ ತೌಹೀದ್ (ಏಕದೇವೋಪಾಸನೆ) ಸ್ಥಾಪನೆಗಾಗಿ ಬಂದಿತ್ತು ಮತ್ತು ಇದೇ ಉದ್ದೇಶಕ್ಕಾಗಿ ಮುಸ್ಲಿಂ ದೇಶಗಳು ಶ್ರಮಿಸಬೇಕು ಹಾಗೂ ಒಗ್ಗೂಡಬೇಕು. ಈ ಪ್ರಬಲ ದೇಶಗಳನ್ನು ತಮ್ಮ ದೇವರು ಎಂದು ಭಾವಿಸಬಾರದು, ಇಲ್ಲದಿದ್ದರೆ ಈ ದೇಶಗಳು ಒಂದೊಂದಾಗಿ ಎಲ್ಲ ಇಸ್ಲಾಮಿಕ ದೇಶಗಳನ್ನು ಮತ್ತು ಅವುಗಳ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳುವುವು.

ಪವಿತ್ರ ಖುರ್‌ಆನ್ ಮುಸ್ಲಿಮರಿಗೆ ಹೀಗೆ ಸ್ಪಷ್ಟವಾದ ಮಾರ್ಗದರ್ಶನ ನೀಡಿದೆ: ಸತ್ಯವಿಶ್ವಾಸಿಗಳ ಪೈಕಿ ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ, ನೀವು ಅವರ ಮಧ್ಯೆ ಸಂಧಾನವೇರ್ಪಡಿಸಿರಿ. ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಕ್ರಮಣವೆಸಗಿದರೆ, ಅಲ್ಲಾಹನ ಆಜ್ಞೆಯ ಕಡೆಗೆ ಅವರು ಮರಳುವ ತನಕ ಎಲ್ಲರೂ ಸೇರಿ ಅವರ ವಿರುದ್ಧ ಹೋರಾಡಿರಿ. ಅನಂತರ, ಆ ಗುಂಪು ಮರಳಿದರೆ ಅವರ ಮಧ್ಯೆ ನ್ಯಾಯಯುತವಾಗಿ ಸಂಧಾನ ಮಾಡಿಸಿರಿ ಹಾಗೂ ನ್ಯಾಯೋಚಿತವಾಗಿ ವರ್ತಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ನ್ಯಾಯವಂತರನ್ನು ಪ್ರೀತಿಸುತ್ತಾನೆ.

ಇದು ಲೋಕದ ಶಾಂತಿಗಾಗಿಯೂ ಅಗತ್ಯವಿರುವ ಆಜ್ಞೆಯಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಈ ಮಾರ್ಗದರ್ಶನ ನೀಡಿರುವುದರಿಂದ ಮುಸ್ಲಿಮರಿಗೆ ಇದು ಇನ್ನಷ್ಟು ಮುಖ್ಯವಾದ ಆದೇಶವಾಗಿದೆ. ರಾಜಿ ಮಾಡಿಸುವಾಗ ತಮ್ಮ ವೈಯಕ್ತಿಕ ಲಾಭಗಳನ್ನು ನೋಡದೆ ಮೂಲ ಸಮಸ್ಯೆಗೆ ತೀರ್ಪು ಮಾಡಬೇಕು. ಚೀನಾ ಮತ್ತು ಇತರ ಕೆಲವು ದೇಶಗಳು ರಾಜಿ ಮಾಡಿಸಲು ಪ್ರಸ್ತಾಪ ಮುಂದಿಟ್ಟಿವೆ. ಇರಾನ್ ಸೇರಿದಂತೆ ಈ ಅರಬ್ ದೇಶಗಳು ಇದರತ್ತ ಗಮನಹರಿಸಬೇಕು.

ಮುಸ್ಲಿಂ ದೇಶಗಳು ಈ ಮಾತನ್ನು ಅರ್ಥಮಾಡಿಕೊಂಡರೆ ಎಷ್ಟು ಚೆನ್ನ! ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ. ಹೇಗಿದ್ದರೂ ವಿಶೇಷವಾಗಿ ಮುಸ್ಲಿಂ ದೇಶಗಳಿಗಾಗಿ ಮತ್ತು ಮುಗ್ಧರಿಗಾಗಿ ದುಆ ಮಾಡುವುದು ನಮ್ಮ ಕೆಲಸವಾಗಿದೆ. ವಿಶೇಷವಾಗಿ ರಮಝಾನ್ ತಿಂಗಳಲ್ಲಿ ನಿಮ್ಮ ವೈಯಕ್ತಿಕ ಪ್ರಾರ್ಥನೆಗಳತ್ತ ಮಾತ್ರ ಗಮನಹರಿಸದೆ, ಮುಸ್ಲಿಂ ಉಮ್ಮತ್‌ಗಾಗಿಯೂ ದುಆ ಮಾಡಿರಿ. ಲೋಕದಲ್ಲಿ, ವಿಶೇಷವಾಗಿ ಮುಸ್ಲಿಂ ದೇಶಗಳಲ್ಲಿ ಶಾಂತಿ ನೆಲೆಸಲು, ಮುಸ್ಲಿಮರು ಮುಸ್ಲಿಮರ ತಲೆಯನ್ನು ಕಡಿಯದಿರಲು ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ. ಇವರು ಪರಸ್ಪರ ಕಾದಾಡುತ್ತಾ ತಪ್ಪು ರೀತಿಯಲ್ಲಿ ಒಬ್ಬರನ್ನೊಬ್ಬರು ಕೊಂದು ಅಲ್ಲಾಹನ ಕೋಪಕ್ಕೆ ಗುರಿಯಾಗುತ್ತಿದ್ದಾರೆ. ಇಂತಹ ಜನರು ಈ ಲೋಕದಲ್ಲಿ ಮಾತ್ರವಲ್ಲ, ಪರಲೋಕದಲ್ಲೂ ನಷ್ಟ ಅನುಭವಿಸುವವರಾಗುತ್ತಾರೆ. ಆದ್ದರಿಂದ ಈ ವಿಷಯವನ್ನು ವಿಶೇಷವಾಗಿ ಗಮನಿಸಬೇಕಾದ ಅಗತ್ಯವಿದೆ. ಅಲ್ಲಾಹನು ನಮಗೆ ನಿಜವಾದ ರೀತಿಯಲ್ಲಿ ದುಆ ಮಾಡುವ ಸೌಭಾಗ್ಯ ಸಹ ನೀಡಲಿ.

ಖುತ್ಬದ ಕೊನೆಯಲ್ಲಿ ಹುಝೂರ್ ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ಼ ಗ್ಹಾಯಿಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು.

ಮೊದಲನೆಯದಾಗಿ ಸನ್ಮಾನ್ಯ ಸಾಹಿಬ್‌ಝ಼ಾದಿ ಅಮತುಲ್ ಜಮೀಲ್ ಸಾಹಿಬ. ಇವರು ಹಝ್ರತ್ ಮುಸ್ಲಿಹ್ ಮೌಊದ್[ರ]ರ ಅತಿ ಕಿರಿಯ ಪುತ್ರಿಯಾಗಿದ್ದರು ಮತ್ತು ನಾಸಿರ್ ಮಹ್‌ಮೂದ್ ಸಿಯಾಲ್ ಸಾಹಿಬ್‌ರ ಪತ್ನಿಯಾಗಿದ್ದರು. ಹಝ್ರತ್ ಚೌಧರಿ ಫತೇಹ್ ಮುಹಮ್ಮದ್ ಸಿಯಾಲ್ ಸಾಹಿಬ್‌ರ[ರ] ಸೊಸೆಯಾಗಿದ್ದರು. ಹಝ್ರತ್ ಸೈಯದ ಮರ್ಯಮ್ ಬೇಗಂ ಸಾಹಿಬ (ಉಮ್ಮೆ ತಾಹಿರ್)ರ ಪುತ್ರಿಯಾಗಿದ್ದರು. ಹಝ್ರತ್ ಮುಸ್ಲಿಹ್ ಮೌಊದ್[ರ]ರ ಮಕ್ಕಳಲ್ಲಿ ಅತ್ಯಂತ ಕಿರಿಯರಾಗಿದ್ದರು. 1955ರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್[ರ] ಇವರ ನಿಕಾಹ್ ನೆರವೇರಿಸಿದ್ದರು. ಇವರಿಗೆ ನಾಲ್ವರು ಮಕ್ಕಳಿದ್ದಾರೆ. ದಿವಂಗತೆಯು ಬಡವರನ್ನು ಪೋಷಿಸುವ, ದುಆ ಮಾಡುವ, ಸಾತ್ವಿಕ ಹಿರಿಯ ಮಹಿಳೆಯಾಗಿದ್ದರು.

2. ಸನ್ಮಾನ್ಯ ನಿಝ಼ಾಮುದ್ದೀನ್ ಸಾಹಿಬ್‌ರ ಪುತ್ರರಾದ ಹಾಲೆಂಡ್‌ನ ಸನ್ಮಾನ್ಯ ಡಾಕ್ಟರ್ ರಶೀದ್ ಅಹ್ಮದ್ ಖಾನ್ ಸಾಹಿಬ್. ಇವರು ಇತ್ತೀಚೆಗೆ ತಮ್ಮ 91ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಇವರಿಗೆ ನಾಲ್ವರು ಪುತ್ರರು ಮತ್ತು ನಾಲ್ವರು ಪುತ್ರಿಯರಿದ್ದಾರೆ. ದಿವಂಗತರು ಉತ್ತಮ ಸ್ವಭಾವಗುಣವುಳ್ಳ, ನಿರ್ಭೀತ, ದೇವಭಯವುಳ್ಳ, ಸ್ನೇಹಮಯಿ, ರಕ್ತಸಂಬಂಧಗಳನ್ನು ಬೆಸೆಯುವವರು, ಖಿಲಾಫತಿನ ಪ್ರೇಮಿ ಮತ್ತು ತ್ಯಾಗಕ್ಕಾಗಿ ಸದಾ ಸಿದ್ಧರಿರುವ ಹಿರಿಯರಾಗಿದ್ದರು. ದಿವಂಗತರಿಗೆ ತಬ್ಲೀಗ್ ಮಾಡುವ ತೀವ್ರ ಆಸಕ್ತಿ ಸಹ ಇತ್ತು.

3. ಚಕ್ ಕರ್ತಾರ್‌ಪುರ ಜಮಾಅತಿನ ಮಾಜಿ ಅಧ್ಯಕ್ಷ ದಿವಂಗತ ಬಶೀರ್ ಅಹ್ಮದ್ ಸಾಹಿಬ್‌ರ ಪತ್ನಿ, ಸನ್ಮಾನ್ಯ ಝ಼ೈನಬ್ ಬೀಬಿ ಸಾಹಿಬ. ಇವರು ಇತ್ತೀಚೆಗೆ ತಮ್ಮ 85ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ**

**ರಾಜಿಊನ್**. ಇವರು ವಸಿಯ್ಯತ್ ಮಾಡಿದ್ದರು. ತಹಜ್ಜುದ್ ನಿರ್ವಹಿಸುವ, ದುಆ ಮಾಡುವ, ಪವಿತ್ರ ಖುರ್‌ಆನ್ ಓದುವ ಸದ್ಗುಣಶೀಲ ಮಹಿಳೆಯಾಗಿದ್ದರು. ಇವರ ಪುತ್ರಿಯು ಜಮಾಅತಿನ ಮುಬಲ್ಲಿಗ್‌ರ ಪತ್ನಿಯಾಗಿದ್ದು, ಅವರಿಗೆ ತಮ್ಮ ತಾಯಿಯ ಜನಾಝದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ.

ಹುಝೂರ್ ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಅವರ ಪದವಿಗಳ ಉನ್ನತಿಗಾಗಿ ದುಆ ಮಾಡಿದರು.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis****(atba)*

At, ***'Masjid Mubarak',*** *Islamabad, Tilford,* U.K. On 06-03-2026

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon